**ದಿಃ03-09-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಕೆ.ಇ.ಸಿ. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಕಡೂರು ಪೊಲೀಸ್ ಠಾಣೆಯ ಠಾಣಾ ಮೊಖದ್ದಮೆ ಸಂಖ್ಯೆ 269/2023 ಕ್ಕೆ ಸಂಬಂಧಿಸಿದ ದೂರು, ಪ್ರಥಮ ವರ್ತಮಾನ ವರದಿ, ಮಹಜರು, ವಾಹನ ಅಮಾನತ್ತು ಪಂಚನಾಮೆ, ವಾಹನ ತಪಾಸಣ ವರದಿಗಳು, ಗಾಯದ ಪ್ರಮಾಣ ಪತ್ರ ಮತ್ತು ದೋಷಾರೋಪಣ ಪಟ್ಟಿಯ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.1 ರಿಂದ 7 ಎಂದು ಗುರುತಿಸಲಾಯಿತು.

ಚಂದ್ರಗಿರಿ ಆಸ್ಪತ್ರೆ, ಶಿವಮೊಗ್ಗ ರವರು ವಿತರಿಸಿರುವ ಬಿಡುಗಡೆ ಸಾರಾಂಶವನ್ನು ಹಾಜರುಪಡಿಸಿದ್ದು ನಿಪಿ.8 ಎಂದು ಗುರುತಿಸಲಾಯಿತು. ಎರಡು ಅಂಗನ್ಯೂನ್ಯತೆಯ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದ್ದು ನಿಪಿ.9 ಮತ್ತು 10 ಎಂದು ಗುರುತಿಸಲಾಯಿತು. ಚಂದ್ರಗಿರಿ ಆಸ್ಪತ್ರೆರವರು ನೀಡಿರುವ ಹೊರರೋಗಿಯ ಚೀಟಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಹೊಳಲ್ಕೆರೆ ರವರು ನೀಡಿರುವ 4 ಹೊರರೋಗಿಗಳ ಚೀಟಿಗಳನ್ನು ಹಾಜರುಪಡಿಸಿದ್ದು ನಿಪಿ.11 ರಿಂದ 16 ಎಂದು ಗುರುತಿಸಲಾಯಿತು. ಮಾತೃಶ್ರೀ ಲ್ಯಾಬರೋಟರಿ ಅಜ್ಜಂಪುರ ರವರು ನೀಡಿರುವ ವರದಿಯನ್ನು ಹಾಜರುಪಡಿಸಿದ್ದು ನಿಪಿ.17 ಎಂದು ಗುರುತಿಸಲಾಯಿತು. ಚಂದ್ರಗಿರಿ ಆಸ್ಪತ್ರೆ, ಶಿವಮೊಗ್ಗರವರು ನೀಡಿರುವ ವರದಿಯನ್ನು ಹಾಜರುಪಡಿಸಿದ್ದು ನಿಪಿ.18 ಎಂದು ಗುರುತಿಸಲಾಯಿತು.

90 ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.19(1) ರಿಂದ ನಿಪಿ.19(90) ಎಂದು ಗುರುತಿಸಲಾಯಿತು. 12 ವೈದ್ಯಕೀಯ ಸಲಹಾ ಚೀಟಿಗಳನ್ನು ಹಾಜರುಪಡಿಸಿದ್ದು ನಿಪಿ.20(1) ರಿಂದ 20(12) ಎಂದು ಗುರುತಿಸಲಾಯಿತು. ಶಾಲಾ ದಾಖಲಾತಿಯನ್ನು ಹಾಜರುಪಡಿಸಿದ್ದು ನಿಪಿ.21 ಎಂದು ಗುರುತಿಸಲಾಯಿತು. ಅಪಘಾತದ ಪರಿಣಾಮ ನನಗೆ ಉಂಟಾದ ಗಾಯಗಳ ಕುರಿತಾಗಿ ಛಾಯಾಚಿತ್ರಗಳು ಮತ್ತು ಸಿ.ಡಿ. ಯನ್ನು ಹಾಜರುಪಡಿಸಿದ್ದು ನಿಪಿ.22 ರಿಂದ 27 ಎಂದು ಗುರುತಿಸಲಾಯಿತು. ನನ್ನ ಹೆಸರಿನಲ್ಲಿ ಅಜ್ಜಂಪುರ ಗ್ರಾಮದ ಸ.ನಂ.96/2 ರಲ್ಲಿ 1 ಎಕರೆ 14 ಗುಂಟೆ, ಸ.ನಂ.34/1 ಬಿ2 ರಲ್ಲಿ 1

ಎಕರೆ ಸ.ನಂ.25/5 ರಲ್ಲಿ 1 ಎಕರೆ, ಸ.ನಂ.96/5 ರಲ್ಲಿ 18.08 ಗುಂಟೆ ಜಮೀನು ಇರುವ ಬಗ್ಗೆ 4 ಪಹಣಿಗಳನ್ನು ಹಾಜರುಪಡಿಸಿದ್ದು ನಿಪಿ.28 ರಿಂದ 31 ಎಂದು ಗುರುತಿಸಲಾಯಿತು. 2 ಕ್ಷ ಕಿರಣಗಳನ್ನು ಹಾಜರುಪಡಿಸಿದ್ದು ನಿಪಿ.32 ಮತ್ತು 33 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ